

# ದುಬಾರಿ ಗಿಳಿ!

ಗಿಳಿಗಳೆಂದರೆ ಎಲ್ಲರಿಗೂ ಅಚ್ಚುಮೆಚ್ಚು. ಅವುಗಳ ಬಣ್ಣ, ಎಲ್ಲವೂ ಬಹಳ ಚಂದ. ಶುಭ ಶಕುನವೆಂದೂ ತಿಳಿದಿರುವ ಹಲವರು ಅವುಗಳನ್ನು ತಂದು ಮನೆಗಳಲ್ಲಿ ಸಾಕುತ್ತಾರೆ. ಕೆಲವರಂತೂ ಪಳಗಿಸಿಕೊಂಡು ತಮ್ಮಂತೆಯೇ ಅನುಕರಿಸುವುದನ್ನು ಕಲಿಸುತ್ತಾರೆ. ಬ್ರೆಜಿಲ್‌ನ ಅಮೆಜೋನಿಯಾದಲ್ಲಿ ಅತಿವಿರಳವಾಗಿ ಕಾಣಸಿಗುವ ಲಿಮರ್ಸ್ ಮಕಾ ಎಂಬ ಪ್ರಬೇಧದ ಗಿಳಿಯು ಅಪಾರ ಬೇಡಿಕೆ ಹೊಂದಿದ್ದು ಒಂದು ಗಿಳಿಯ ಬೆಲೆ ಹತ್ತು ಲಕ್ಷ ರೂಪಾಯಿ..!

ಈ ವಿಶಿಷ್ಟ ಹಕ್ಕಿ ಲಿಮರ್ಸ್ ಮೆಕಾ ಸುಮಾರು 250 ಪ್ರಬೇಧಗಳಿರುವ ಗಿಣಿ ಕುಟುಂಬಕ್ಕೆ ಸೇರಿದೆ. ಇದರಲ್ಲಿ ಮೆಕಾ  ಬೃಹತ್ ಗಾತ್ರದ್ದು, ಭಾರೀ ಕೊಕ್ಕು, ಉದ್ದನೆಯ ಬಾಲ, ಅತ್ಯದ್ಭುತ ವರ್ಣ ವೈಭವಗಳಿಂದಾಗಿ ಈ ಹಕ್ಕಿಗೆ ಅಪಾರ ಬೇಡಿಕೆ. ಮಕಾಗಳ ಒಂದು ಪ್ರಬೇಧವಾದ ಹನೂ ಸಿಂತ್ ಮಕಾವು ಬಾಲವನ್ನೂ ಸೇರಿಸಿ ಸುಮಾರು ಒಂದು ಮೀಟರ್ ಉದ್ದವಾಗಿದ್ದು, ಒಂದೂವರೆ ಕೇಜಿ ತೂಗಬಲ್ಲದು. ಮಕಾಗಳು ದೀರ್ಘ ಆಯುಷ್ಯದ ಹಕ್ಕಿಗಳಾಗಿದ್ದು ಸುಮಾರು 45 ವರ್ಷಗಳಷ್ಟು ಕಾಲ ಬದುಕಿರುತ್ತವೆ. ಕೆಲವೊಂದು ಪ್ರಾಣಿ ಸಂಗ್ರಹಾಲಯದಲ್ಲಿ 60 ರಿಂದ 70 ವರ್ಷಗಳವರೆಗೆ ಬದುಕಿದ ಇತಿಹಾಸವಿದೆ.

ಮಕಾಗಳು ತಮ್ಮ ಒಡನಾಡಿಗಳೊಂದಿಗೆ ಸದಾಕಾಲ ಮೃದುವಾಗಿ ಏನಾದರೂ ಪಿಸುಗುಡುತ್ತಿರುತ್ತವೆ. ಆದರೆ ಕಿವಿಗಡಚಿಕ್ಕುವಂತೆ ಕಿರುಚುವುದರಲ್ಲೂ ಎತ್ತಿದ ಕೈ. ಅಪರಿಚಿತರೊಂದಿಗೆ ಸುಲಭವಾಗಿ ಬೆರೆಯುವುದಿಲ್ಲ. ವರ್ಣ ವೈಭವದಲ್ಲಂತೂ ಮಕಾಗಳಿಗೆ ಸಾಟಿಯಿಲ್ಲ. ಗರಿಗಳು ವಿವಿಧ ಬಗೆಯ ಬಣ್ಣಗಳಿಂದ ಕೂಡಿರುತ್ತವೆ. ಅದಕ್ಕೆಂದೇ ಜೀವವಿಜ್ಞಾನಿಗಳು ಇವುಗಳಿಗೆ ರೆಕ್ಕೆ ತೊಟ್ಟ ಕಾಮನಬಿಲ್ಲುಗಳೆಂದು ಕರೆದಿದ್ದಾರೆ. ಇವು ಚಿಂಪಾಂಜಿಯಂತೆ ಅಪಾರ ಬುದ್ಧಿಮತ್ತೆಯನ್ನೂ ಹೊಂದಿವೆ.

ಲಿಮರ್ಸ್ ಮಕಾಗಳು ಮುಖ್ಯವಾಗಿ ಮೆಕ್ಸಿಕೋದಿಂದ ಪ್ರಾರಂಭಿಸಿ ಬ್ರೆಜಿಲ್‌ವರೆಗಿನ ಮಧ್ಯ ಅಮೆರಿಕಾದ ಸದಾ ಹಸಿರಿನ ದಟ್ಟ ಕಾಡುಗಳಲ್ಲಿ ಹೆಚ್ಚಾಗಿ ಕಂಡುಬರುತ್ತವೆ. ಗಗನಚುಂಬಿ ಮರಗಳ ಮೇಲೇ ಇವುಗಳ ವಾಸ.

■ **ಪ.ನಾ.ಹಳ್ಳಿ ಹರೀಶ್ ಕುಮಾರ್**

